ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಗಳು

289(554) ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸರ್ಕಾರದವರು ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳಾವುವು?

ಆ) ಅವುಗಳಿಗೆ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಇ) 1997-98 ರಲ್ಲಿ ಹೊಸದಾಗಿ ಕೈಗೊಂಡಿರುವ ಸಣ್ಣ ನೀರಾವರಿ ಯೋಜನೆಗಳಾವುವು, ಯಾವುವು?

ಈ) ಕೈಗೊಂಡಿರುವ ಎಲ್ಲಾ ಸಣ್ಣ ನೀರಾವರಿ ಯೋಜನೆಗಳನ್ನು ಪೂರೈಸಲು ಸರ್ಕಾರ 97-98ರಲ್ಲಿ ಖರ್ಚು ಮಾಡಿರುವ ಹಣವೆಷ್ಟು?

ಉ) 1997-98ರಲ್ಲಿ ಯಾವ ಯಾವ ಸಣ್ಣ ನೀರಾವರಿ ಯೋಜನೆಗಳು ಪೂರ್ಣಗೊಳ್ಳುವುವು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಮೊಳಕಾಲ್ಮೂರು ತಾಲ್ಲೂಕು ಹಾನಗಲ್ ಹತ್ತಿರ ರಂಗಯ್ಯನದುರ್ಗ ಜಲಾಶಯ ಯೋಜನೆಯ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಆ) ರೂ. 1250.73 ಲಕ್ಷ

ಇ) ರೂ. 46.64 ಲಕ್ಷಗಳು

ಈ) ಯಾವುದೂ ಇಲ್ಲ. ಆದರೆ ರಂಗಯ್ಯನದುರ್ಗ ಜಲಾಶಯ ಯೋಜನೆಯ ಕಾಮಗಾರಿಯನ್ನು 1998-99ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಪೋಲೀಸ್ ಠಾಣೆಗಳು

290 (551) ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಪೋಲೀಸ್ ಠಾಣೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಈತಾಲ್ಲೂಕಿನಲ್ಲಿ 1997-98 ರಲ್ಲಿ ಹೊಸದಾಗಿ ತೆರೆಯಲಾದ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಒಟ್ಟು ಸಂಖ್ಯೆ - 2

ಆ) ಈ ತಾಲ್ಲೂಕಿನಲ್ಲಿ 1997-98 ರಲ್ಲಿ ಯಾವುದೇ ಹೊಸ ಪೋಲೀಸ್ ಠಾಣೆಗಳು ತೆರೆದಿರುವುದಿಲ್ಲ.

ಬೆಂಗಳೂರು ನಗರದ ಹೆಚ್. ಆರ್. ಬಿ. ಆರ್. ಬಡಾವಣೆಗಳಲ್ಲಿ ಅನಧಿಕೃತ ಕಟ್ಟಡಗಳು

291 (318) ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಬೆಂಗಳೂರು ನಗರದ ಹೆಚ್. ಆರ್. ಬಿ. ಆರ್. ಬಡಾವಣೆಯಲ್ಲಿ ಮರಿಯಪ್ಪ ವೃತ್ತದ ಪೂರ್ವಕ್ಕೆ ಬಿ. ಡಿ. ಎ. ಬಡಾವಣೆಯಾಗಿರುವ ಕಲ್ಯಾಣ ನಗರದಲ್ಲಿ (ನಾಲ್ಕನೇ ಕ್ರಾಸ್) ಉತ್ತರ ದಿಕ್ಕಿಗೆ ಮುಖಮಾಡಿ ನಿರ್ಮಾಣವಾಗಿರುವ ಅನೇಕ ಮಳಿಗೆಗಳನ್ನು ನಾಲ್ಕು ಅಂತಸ್ತಿನ ಕಟ್ಟಡವನ್ನೂ ಹಾಗೂ ದೂರವಾಣಿ ಇಲಾಖೆ ಬಾಡಿಗೆಯ ಮೇಲೆ ನಡೆಯುತ್ತಿರುವ ಕಟ್ಟಡಗಳನ್ನು ನಿರ್ಮಿಸಲು ಬಿ. ಡಿ. ಎ. ಅಥವಾ ಬಿ. ಸಿ. ಸಿ. ಅಥವಾ ಸರ್ಕಾರದ ಇನ್ನಾವುದೇ ಇಲಾಖೆ ಅನುಮತಿ ನೀಡಿರುವುದೇ ಅಥವಾ ಇವುಗಳು ಅನಧಿಕೃತ ಕಟ್ಟಡಗಳೇ?

2. ಇವು ಅನಧಿಕೃತ ಕಟ್ಟಡಗಳಾಗಿದ್ದಲ್ಲಿ ಇವುಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುವುದು

3. ಇವುಗಳ ನಿರ್ಮಾಣದಿಂದ ಈ ಬಡಾವಣೆಯಲ್ಲಿರುವ ಜನರಿಗೆ ತೊಂದರೆಯಾಗಿರುವುದು ಸರ್ಕಾರವು ಗಮನಿಸಿರುವುದೇ ಹಾಗೂ ಈ ಮಳಿಗೆಗಳನ್ನು ಕಟ್ಟಿದವರು ರಸ್ತೆ ಬದಿಯಲ್ಲಿ ಬಿ. ಡಿ. ಎ. : ಬಿ. ಸಿ. ಸಿ. ಯವರು ನಿರ್ಮಾಣ ಮಾಡಿರುವ ಚರಂಡಿಗಳನ್ನು ಮುಚ್ಚಿರುವುದು ಅಲ್ಲದೆ ಫುಟ್ ಬಾತ್ ಗಳನ್ನು ಆಕ್ರಮಿಸಿರುವುದು ಸರ್ಕಾರ ಗಮನಿಸಿರುವುದೇ?

4. ನಿರ್ಮಾಣದ ಹಂತದಲ್ಲಿರುವ ಅನಧಿಕೃತ ಎನ್ನಲಾದ ಈ ಕಟ್ಟಡಗಳನ್ನು ಸರ್ಕಾರ ತಕ್ಷಣ ನಿರ್ಬಂದಿಸಿ ಮುಂದೆ ಆಗಬಹುದಾದ ತೊಂದರೆಗಳನ್ನು ಈಗಲೇ ನಿವಾರಿಸಬಹುದಲ್ಲವೇ?

5. ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1. ಸದರಿ ನಿರ್ಮಾಣಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ : ಬೆಂಗಳೂರು ಮಾಹಾನಗರ ಪಾಲಿಕೆ ಅನುಮತಿ ನೀಡಿರುವುದಿಲ್ಲ.

ಅನಧಿಕೃತ ನಿರ್ಮಾಣಗಳ ವಿವರಗಳನ್ನು ಪರಿಶೀಲಿಸಲಾಗುತ್ತಿದ್ದು, ಚರಂಡಿ ಮತ್ತು ಫುಟ್ ಬಾತ್ ಗಳ ಮೇಲೆ ಇರತಕ್ಕಂತಹ ನಿರ್ಮಾಣಗಳ ಸಹಿತ ಅನಧಿಕೃತ ನಿರ್ಮಾಣಗಳನ್ನು ತೆಗೆಸಿ ಹಾಕಲು ಕ್ರಮ ತೆಗೆದುಕೊಳ್ಳಲಾಗುವುದು.

ಮಂಗಳೂರಿನಲ್ಲಿ ಸುಸಜ್ಜಿತ ಜೈಲು ನಿರ್ಮಾಣ

292 (314) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1. ಮಂಗಳೂರಿನಲ್ಲಿರುವ ಸಬ್ ಜೈಲಿನಿಂದ ಇತ್ತೀಚೆಗೆ ಎಷ್ಟು ಮಂದಿ ಕ್ರಿಮಿನಲ್ ಕೈದಿಗಳು ಯಾವ